**ಸಾಕ್ಷಿಯು ದಿಃ 05.08.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: 1ನೇ ಪ್ರತಿವಾದಿ ಪರ ಶ್ರೀ ಪಿ.ಎಸ್.ಜಿ ವಕೀಲರಿಂದ**

ಮುಂದುವರೆದ ಮುಖ್ಯ ವಿಚಾರಣೆಯ ಭಾಗವಾಗಿ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ 1 ಮತ್ತು 2 ಎಂದು, ಹಕ್ಕು ಬದಲಾವಣೆ ವಹಿಯ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ 3 ಎಂದು, ದಿಃ 23.12.1997 ರ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ 4 ಎಂದು, ಓಎಸ್ 83/2001ರ ವಾದ ಪತ್ರ ಮತ್ತು ತೀರ್ಪಿನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ 5 ಮತ್ತು 6 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಬಿ. ವಕೀಲರಿಂದ**

ನಾನು 2ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ತಂದೆ ಚಂದ್ರಪ್ಪ ರವರು ಮೃತಪಟ್ಟು ಸುಮಾರು 40 ವರ್ಷಗಳು ಕಳೆದಿವೆ. ನನ್ನ ತಂದೆಗೆ ವಾದಿ, 1ನೇ ಪ್ರತಿವಾದಿಯಾದ ನಾನು ಹಾಗೂ 3 ರಿಂದ 6ನೇ ಪ್ರತಿವಾದಿಗಳ ತಾಯಿ ದೇವಿರಮ್ಮ ಮತ್ತು 7ನೇ ಪ್ರತಿವಾದಿಯ ಗಂಡ ಪುಟ್ಟಸ್ವಾಮಪ್ಪ, ಒಟ್ಟು 4 ಜನ ಮಕ್ಕಳು ಎಂದರೆ ಸರಿ. ನನ್ನ ಅಣ್ಣ ಪುಟ್ಟಸ್ವಾಮಪ್ಪ ಮೃತಪಟ್ಟು ಸುಮಾರು 20 ವರ್ಷಗಳು ಕಳೆದಿವೆ. ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ನನ್ನ ತಂದೆ ಚಂದ್ರಪ್ಪ ರವರಿಗೆ ಸರ್ವೇ ನಂಬರ್ 60 ರಲ್ಲಿ 4 ಎಕರೆ 20 ಗುಂಟೆ ಜಮೀನು ಇದೆ. ಸರ್ವೇ ನಂಬರ್ 59 ರಲ್ಲಿ ಇರುವ 2 ಎಕರೆ 37 ಗುಂಟೆ ಆಸ್ತಿ ನನ್ನ ತಂದೆಯಿಂದ ನನಗೆ ಬಂದಿದೆ ಎಂದರೆ ಸಾಕ್ಷಿಯು ಇಲ್ಲ ನಾನು ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಾನು ಒಟ್ಟು ಕುಟುಂಬದಲ್ಲಿದ್ದಾಗ ಸರ್ವೇ ನಂಬರ್ 60ರ ಆಸ್ತಿಯಿಂದ ಬಂದ ಆದಾಯದಲ್ಲಿ ಸರ್ವೇ ನಂಬರ್ 59 ರ ಆಸ್ತಿಯನ್ನು ನನ್ನ ಹೆಸರಿಗೆ ಖರೀದಿಸಲಾಗಿದೆ ಎಂದರೆ ಸಾಕ್ಷಿಯು ಇಲ್ಲ ನಾನು, ನನ್ನ ಹೆಂಡತಿ ಮಕ್ಕಳು, ಕಾಫಿ ತೋಟಕ್ಕೆ ಹೋಗಿ ಕೂಲಿ ಮಾಡಿ ಸರ್ವೇ ನಂಬರ್ 59ರ ಆಸ್ತಿಯನ್ನು ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಾವು ಗೋಣಿಕೊಪ್ಪದ ಕಾಫಿ

ತೋಟದಲ್ಲಿ ಸುಮಾರು 10-12 ವರ್ಷಗಳ ಕಾಲ ಇದ್ದೇವು, ಯಾವ ಸಾಲಿನಿಂದ ಯಾವ ಸಾಲಿನವರೆಗೆ ಇದ್ದೆವು ಎಂದು ಹೇಳಲಾಗುವುದಿಲ್ಲ. ಹೊಸಹಳ್ಳಿ ಗ್ರಾಮದಲ್ಲಿರುವ ದಾವ ಐಟಂ ನಂಃ 1ನೇ ಸ್ವತ್ತು ಮತ್ತು ಹೊಸಹಳ್ಳಿ ಗ್ರಾಮದಲ್ಲಿರುವ ಮನೆ ಈಗಲೂ ಒಟ್ಟು ಕುಟುಂಬದಲ್ಲಿ ಇದೆ ಎಂದರೆ ಸಾಕ್ಷಿಯು ಇಲ್ಲ ನಾನು ಮತ್ತು ನನ್ನ ಅಣ್ಣ ಸುಮಾರು ವರ್ಷಗಳ ಹಿಂದೆಯೇ ಭಾಗ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಭಾಗವನ್ನು ಬರವಣಿಗೆಯಲ್ಲಿ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಮೌಖಿಕವಾಗಿ ಮೂಡಲಾಗಿ ಅಣ್ಣನಿಗೆ ಪಡವಲ ದಿಕ್ಕಿಗೆ ನನಗೆ ಎಂದು ವಿಭಾಗ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನಾವು ಯಾವುದೇ ವಿಭಾಗ ಮಾಡಿಕೊಂಡಿಲ್ಲದೇ ಇದ್ದರೂ ಸಹ ವಾದಿಗಳಿಗೆ ಮತ್ತು ಇತರ ಪ್ರತಿವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ 4 ಜನ ಮಕ್ಕಳು, ಆ ಪೈಕಿ 3 ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾನೆ. ನಾನು 1976ನೇ ಇಸವಿಯಲ್ಲಿ ಮದುವೆಯಾಗಿದ್ದು ಮದುವೆಯಾದ 2 ವರ್ಷಗಳಲ್ಲಿ ಅಂದರೆ ಸುಮಾರು 1978ನೇ ಇಸವಿಯಲ್ಲಿ ಕುಟುಂಬ ಸಮೇತ ಗೋಣಿಕೊಪ್ಪದ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗಿ ಸೇರಿಕೊಂಡಿದ್ದು ಆಗ ನನಗೆ ದಿನಕ್ಕೆ ರೂ.2.60 ಪೈಸೆ ಕೂಲಿ ಇತ್ತು, ಗುತ್ತಿಗೆಗೂ ಸಹ ಕೆಲಸ ಕೊಡುತ್ತಿದ್ದು ನಾವು ಕಾಫಿ ಹಣ್ಣನ್ನು ಇಳಿಸಿ ದಿನಕ್ಕೆ ರೂ.10-12 ಸಂಪಾದನೆ ಮಾಡಿತ್ತಿದ್ದೇವು ಎಂದು ನುಡಿಯುತ್ತಾರೆ. ಆಗ ನಿಮ್ಮ ಕುಟುಂಬಕ್ಕಾಗಿ ತಿಂಗಳಿಗೆ ರೂ.1,000/- ಖರ್ಚು ಮಾಡುತ್ತಿದ್ದೀರಾ ಎಂದರೆ ಸಾಕ್ಷಿಯು 100-150 ರೂಪಾಯಿ ಖರ್ಚು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಿಮ್ಮ ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಾಫಿ ತೋಟಕ್ಕೆ ಹೋಗಿ ದುಡಿದು, ದಾವ ಐಟಂ ನಂಃ 2ನೇ ಆಸ್ತಿಯನ್ನು ಖರೀದಿಸಿರುವುದಾಗಿ ಬರಿಸಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ಬರೆಸಿಲ್ಲ ಆದರೆ ನನ್ನ ಸ್ವಯಾರ್ಜಿತ ಆಸ್ತಿ ಎಂದು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ದಾವ ಐಟಂ ನಂಃ2ನೇ ಆಸ್ತಿ ಒಟ್ಟು ಕುಟುಂಬದ ಸ್ವತ್ತಿನ ಆದಾಯದಿಂದ ಖರೀದಿಸಿದ ಕಾರಣ ನಾನು ಕಾಫಿ ತೋಟದಲ್ಲಿ ದುಡಿದು ಸದರಿ ಆಸ್ತಿಯನ್ನು ಖರೀದಿಸಿರುವುದಾಗಿ ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ.

ಓಎಸ್ 233/2021

ಡಿಡಬ್ಲ್ಯೂ 1

3. ದಾವ ಆಸ್ತಿಗಳಲ್ಲಿ ವಾದಿಗಳಿಗೆ ಭಾಗ ನೀಡಿಲ್ಲ ಎಂದರೆ ಸರಿ. ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ದಾವ ಐಟಂ ನಂಃ2ನೇ ಆಸ್ತಿ ನನ್ನ ಸ್ವಯಾರ್ಜಿತ ಸ್ವತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುಂಡ್ಲುಪೇಟೆಯ ಗಣಪತಿ ದೇವಸ್ಥಾನದಲ್ಲಿ ಅರ್ಚಕ ವೃತ್ತಿ ಮಾಡಿ ದಾವ ಐಟಂ ನಂಃ 2ನೇ ಸ್ವತ್ತನ್ನು ಖರೀದಿಸಿದ್ದೇನೆ ಎಂಬುದು ಸುಳ್ಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಈಗಲೂ ಸಹ ಗಣಪತಿ ದೇವಸ್ಥಾನದಲ್ಲಿ ಪೂಜೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಕಳೆದ 30 ವರ್ಷಗಳಿಂದ ಗುಂಡ್ಲುಪೇಟೆಯ ಗಣಪತಿ ದೇವಸ್ಥಾನದಲ್ಲಿ ಪೂಜೆ ಮಾಡುತ್ತಾ ಬಂದಿದ್ದೇನೆ. ಸದರಿ ದೇವಸ್ಥಾನವು ಮುದರಾ ಇಲಾಖೆಗೆ ಸೇರಿರುವುದಿಲ್ಲ. ನಾನು ನನ್ನ ಪ್ರಮಾಣಪತ್ರದಲ್ಲಿ ನಾನು ವ್ಯವಸಾಯ ವೃತ್ತಿ ಮಾಡುತ್ತಿರುವುದಾಗಿ ಬರೆಸಿದ್ದು ಒಟ್ಟು ಕುಟುಂಬದ ಸ್ವತ್ತಿನಲ್ಲಿ ವ್ಯವಸಾಯ ಮಾಡಿ ದಾವ ಐಟಂ ನಂಃ 2ನೇ ಸ್ವತ್ತಿನಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಅಣ್ಣ ಪುಟ್ಟಸ್ವಾಮಿ ಮತ್ತು ನಾನು ನನ್ನ ಮದುವೆಯಾದ 1 ವರ್ಷದ ನಂತರ ನಮ್ಮ ಕುಟುಬಂದ ಆಸ್ತಿಯನ್ನು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತೇವೆ, ನಿಖರವಾದ ಇಸವಿ ಹೇಳಲಾಗುವುದಿಲ್ಲ. ದಾವ ಐಟಂ ನಂಃ 1ನೇ ಆಸ್ತಿಯನ್ನು ಸಹ ನಾವು ವಿಭಾಗ ಮಾಡಿಕೊಡದೇ ಇದ್ದರೂ ಸಹ ಅದ ರಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ